## ನಿವೇದನೆ

# ಕೌಶಲ ಕೊರತೆಗೆ ವಿದ್ಯಾರ್ಥಿಗಳಷ್ಟೇ ಕಾರಣರಲ್ಲ...

> ‘ಉನ್ನತ ಶಿಕ್ಷಣ ಹೊಂದಿದ ಶೇ. 53ರಷ್ಟು ಮಂದಿ ಯಾವ ಕ್ಷೇತ್ರದಲ್ಲೂ ಕೆಲಸ ಮಾಡಲು ಯೋಗ್ಯರಲ್ಲ’ ಎಂದು ನೀತಿ ಆಯೋಗ ಹೇಳಿದೆ. ಅಂದರೆ ಉನ್ನತ ಶಿಕ್ಷಣವನ್ನು ಒಂದು ವಿಷವರ್ತುಲ ಮಾಡಿ ಅದರಲ್ಲಿ ವಿದ್ಯಾರ್ಥಿಗಳನ್ನು ಸಿಲುಕಿಸಿದ್ದೇವೆ. ಈ ವಿಷವರ್ತುಲ ಸೃಷ್ಟಿಯಾಗಲು ವಿದ್ಯಾರ್ಥಿಗಳು ಮಾತ್ರ ಕಾರಣ ಅಲ್ಲ. ಪ್ರಧಾನ ಪಾತ್ರವನ್ನು ಒಟ್ಟಾರೆ ನಮ್ಮ ವ್ಯವಸ್ಥೆ ವಹಿಸುತ್ತಿದೆ.



ಈಶ್ವರ

ಪದವಿ ಇದೆ. ಆದರೆ, ಕೌಶಲ ಇಲ್ಲ! ದುಡಿಯುವ ಹಂಬಲ ಇದೆ. ಆದರೆ, ಸಾಮರ್ಥ್ಯದಲ್ಲಿ ಕುಂದು! ಈ ಬಗೆಯ ನ್ಯೂನತೆ ನಮ್ಮ ಉನ್ನತ ಶಿಕ್ಷಣವನ್ನೂ ಆ ಮೂಲಕ ಔದ್ಯೋಗಿಕ ರಂಗವನ್ನೂ ಇವತ್ತು ದೊಡ್ಡ ಮಟ್ಟದಲ್ಲಿ ಬಾಧಿಸುತ್ತಿದೆ. ಉನ್ನತ ಶಿಕ್ಷಣದ ವಸ್ತುಸ್ಥಿತಿ ಕುರಿತು ನೀತಿ ಆಯೋಗವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲೂ ಈ ಊನದ ಬಗ್ಗೆ ಉಲ್ಲೇಖ ಇದೆ. ಹಾಗಂತ ಇದನ್ನು, ದಿಢೀರನೆ ಪತ್ತೆಯಾದ ರೋಗ ಲಕ್ಷಣವೆಂದು ಭಾವಿಸಬೇಕಾಗಿಲ್ಲ. ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ರೀತಿಯಲ್ಲಿ ಇದು ಪ್ರಕಟಗೊಳ್ಳುತ್ತಲೇ ಇದೆ.

ಇಂತಹದೊಂದು ಬಿಕ್ಕಟ್ಟು ಇರುವುದು ನಿಜ. ಆದರೆ ಅದಕ್ಕೆ ವಿದ್ಯಾರ್ಥಿ ಸಮೂಹವನ್ನಷ್ಟೇ ಹೊಣೆಯಾಗಿಸುವ ಪರಿಪಾಟ ಇದೆಯಲ್ಲ, ಅದು ಸರಿ ಅಲ್ಲ. ಉನ್ನತ ಶಿಕ್ಷಣವನ್ನು ಒಂದು ವಿಷವರ್ತುಲ ಮಾಡಿ ಅದರಲ್ಲಿ ವಿದ್ಯಾರ್ಥಿಗಳನ್ನು ಸಿಲುಕಿಸಿದ್ದೇವೆ. ಈ ವಿಷವರ್ತುಲ ಸೃಷ್ಟಿಯಾಗಲು ಪ್ರಧಾನ ಕಾರಣ ಎಂದು ಗುರುತಿಸಲು ಸಾಧ್ಯವಿರುವ ಎಲ್ಲರನ್ನೂ ಬಿಟ್ಟು ಬರೀ ವಿದ್ಯಾರ್ಥಿಗಳನ್ನು ನಿಂದಿಸುವುದು ನ್ಯಾಯೋಚಿತವಲ್ಲ. ‘ಉನ್ನತ ಶಿಕ್ಷಣ ಸಂಸ್ಥೆಗಳಿಂದ ಪ್ರತಿವರ್ಷ ಹೊರಬರುವವರಲ್ಲಿ ಶೇ. 53ರಷ್ಟು ಮಂದಿ ಯಾವ ಕ್ಷೇತ್ರದಲ್ಲೂ ಕೆಲಸ ಮಾಡಲು ಯೋಗ್ಯರಾಗಿಲ್ಲ’ ಎಂದು ನೀತಿ ಆಯೋಗ ಹೇಳಿದೆ. ಔಪಚಾರಿಕ ಶಿಕ್ಷಣ ಇಲ್ಲದೆಯೂ ಸಮಾಜಕ್ಕೆ ಯಾವುದೋ ಒಂದು ರೀತಿಯಲ್ಲಿ ಕೊಡುಗೆ ನೀಡಬಹುದಾದ ಮಾನವ ಸಂಪನ್ಮೂಲವನ್ನು ಉನ್ನತ ಶಿಕ್ಷಣದ ಹೆಸರಿನಲ್ಲಿ ಹೀಗೆ ‘ಯೋಗ್ಯಹೀನ’ರಾಗಿಸಿದ ವ್ಯವಸ್ಥೆ ಬಗ್ಗೆ ಏನನ್ನಬೇಕು!?

ಕಣ್ಣು ಕೋರೈಸುವಂತಹ ಸೌಕರ್ಯಗಳನ್ನು ಹೊಂದಿರುವ ಕ್ಯಾಂಪಸ್, ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಯೋಜನೆ, ಬೃಹತ್ ಕಟ್ಟಡಗಳು ಹಾಗೂ ಪ್ಲೇಸ್‌ಮೆಂಟ್... ಇವುಗಳನ್ನೇ ಗುಣಮಟ್ಟದ ಮಾನದಂಡಗಳನ್ನಾಗಿ ಮಾಡಿಟ್ಟಿದ್ದೇವೆ. ವೃತ್ತಿಪರ ಶಿಕ್ಷಣವನ್ನು ಪ್ಲೇಸ್‌ಮೆಂಟ್ ಕೇಂದ್ರಿತವಾಗಿಸಿದ್ದೇವೆ. ಉದ್ಯೋಗ ಬೇಕು. ಪ್ರತಿಭೆಯನ್ನು ಅದು ಹುಡುಕಿಕೊಂಡು ಬರುವಂತಹ ವ್ಯವಸ್ಥೆ ರೂಪಿಸಬೇಕು. ಅದನ್ನು ಬಿಟ್ಟು ಉದ್ಯೋಗ ಬೇಟೆಯೇ ಎಲ್ಲವೂ ಆಗಬಾರದು. ಈ ಕೆಟ್ಟ ಮಾದರಿಯು ಶಿಕ್ಷಣದ ಮಟ್ಟವನ್ನು ಕೆಳಗಿಳಿಸತೊಡಗಿದೆ. ಉದ್ಯೋಗ ಕೊಡಿಸುವುದು ಕಾಲೇಜಿನ ಕೆಲಸವೇ? ಹಾಗಾದಾಗ ಬೇರೆ ಬೇರೆ ಬಗೆಯ ಪ್ರಭಾವ, ಲಾಬಿಗಳು ಮುನ್ನೆಲೆಗೆ ಬರುತ್ತವೆ. ಶಿಕ್ಷಣ ಸಂಸ್ಥೆಯ ವರ್ಚಸ್ಸು ವೃದ್ಧಿಸಿಕೊಳ್ಳುವ ಧಾವಂತದಲ್ಲಿ ಅರ್ಹರಲ್ಲದವರಿಗೂ ಅವಕಾಶಗಳನ್ನು ದೊರಕಿಸಿಕೊಡುವ ಮೇಲಾಟ ನಡೆಯುತ್ತದೆ. ಹೇಗೋ ಪ್ರವೇಶ ಗಿಟ್ಟಿಸಿದವರು ಅಲ್ಲಿ ‘ಹೊರೆ’ಯಾಗಿ ಉಳಿಯುತ್ತಾರೆ.

ಉನ್ನತ ಶಿಕ್ಷಣ ಎಂಬ ಪರಿಕಲ್ಪನೆಯ ಬಗ್ಗೆಯೇ ನಮ್ಮಲ್ಲಿ ಸ್ಪಷ್ಟತೆ ಇಲ್ಲ. ಯಾವುದು ಉನ್ನತ ಶಿಕ್ಷಣ, ಅದರ ಉದ್ದೇಶ ಏನು ಎಂಬುದರ ಕುರಿತಾಗಿಯೇ ಗೊಂದಲ ಇದೆ. ಪ್ರವೇಶ ನೀತಿ, ಕೌಶಲಗಳನ್ನು ಗುರುತಿಸುವ ಮಾನದಂಡ, ಪರೀಕ್ಷಾ ಪದ್ಧತಿ, ಮೌಲ್ಯಮಾಪನ... ಈ ಎಲ್ಲದರಲ್ಲೂ ಸ್ಪಷ್ಟತೆಯ ಕೊರತೆ ಇದೆ. ಯಾವುದೋ ಒಂದು ಕೋರ್ಸ್, ಇನ್ಯಾವುದೋ ಕಾರಣಕ್ಕಾಗಿ ಬೇಡಿಕೆ ಪಡೆಯಿತೆಂದರೆ ಮುಗಿಯಿತು; ಸಮೂಹ ಸನ್ನಿಗೆ ಒಳಗಾದಂತೆ ಎಲ್ಲ ಪೋಷಕರೂ ಮಕ್ಕಳನ್ನು ಅದೇ ಕೋರ್ಸ್‌ಗೆ ದೂಡುತ್ತಾರೆ– ದೊಡ್ಡಿಗೆ ಕುರಿಗಳನ್ನು ದೂಡಿದಂತೆ. ಮಕ್ಕಳ ಆಸಕ್ತಿ, ಇತಿಮಿತಿ, ಸಾಮರ್ಥ್ಯಗಳ ಬಗ್ಗೆ ಯೋಚಿಸುವ ಪಾಲಕರ ಪ್ರಮಾಣ ಕಡಿಮೆ. ಇನ್ನು ಪ್ರಾಧ್ಯಾಪಕರಲ್ಲಿ ಎಷ್ಟು ಮಂದಿ ತಮ್ಮ ಬೋಧನಾ ಕೌಶಲಗಳನ್ನು ಬದಲಾದ ಕಾಲಮಾನಕ್ಕೆ ತಕ್ಕಂತೆ ಎತ್ತರಿಸಿಕೊಳ್ಳುತ್ತಿದ್ದಾರೆ? ಸರ್ಕಾರಿ ಕಾಲೇಜುಗಳನ್ನು ಅತಿಥಿ ಉಪನ್ಯಾಸಕರ ಕೈಗೆ ಒಪ್ಪಿಸಿ ಸರ್ಕಾರ ಸುಖನಿದ್ದೆಯಲ್ಲಿದೆ. ಅವರಿಗೆ ಪ್ರತೀ ತಿಂಗಳು ಸಂಬಳ ಕೂಡ ಸಂದಾಯವಾಗುತ್ತಿಲ್ಲ. ಪ್ರಾಂಶುಪಾಲರು ಕಾಲಕಾಲಕ್ಕೆ ನೇಮಕಗೊಳ್ಳುವುದಿಲ್ಲ. ಎರವಲು, ತಾತ್ಕಾಲಿಕ ವ್ಯವಸ್ಥೆಯಡಿ ದಿನದೂಡುವ ಸ್ಥಿತಿ ಇದೆ. ಖಾಸಗಿ ಕಾಲೇಜುಗಳ ವ್ಯಥೆ ಇನ್ನೊಂದು ಬಗೆಯದು. ಅನುಭವ, ಅರ್ಹತೆ ಇಲ್ಲದವರಿಗೂ ಬೋಧನೆಯ ಅವಕಾಶ ಕೊಡುವ ಮೂಲಕ ಕೆಲವು ಖಾಸಗಿ ಕಾಲೇಜುಗಳು ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟ ಆಡುತ್ತಿವೆ. ಹೀಗಾಗಿ ಉದ್ಯೋಗಾರ್ಹತೆ–ಕೌಶಲದ ಕೊರತೆಯನ್ನು ವಿದ್ಯಾರ್ಥಿಗಳ ಕೊರಳಿಗಷ್ಟೇ ಕಟ್ಟುವುದು ಜಟಿಲ ಸಮಸ್ಯೆಯನ್ನು ಸರಳೀಕರಿಸಿದಂತೆಯೇ ಸರಿ.

■ ಎನ್. ಉದಯಕುಮಾರ್